Akashvani : Bangalore
National Bulletin In Kannada
09.11.2024 / 7.35AM
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು :

- ಮಹಾರಾಷ್ಟ್ರ, ಜಾರ್ಖಂಡ್ ವಿಧಾನಸಭೆ ಚುನಾವಣೆ: ಎನ್‌ಡಿಎ, ಐ.ಎನ್.ಡಿ.ಐ. ಮೈತ್ರಿಕೂಟದ ನಾಯಕರಿಂದ ಪ್ರಚಾರ
- ವೈದ್ಯಕೀಯ ಸಾಧನ ಉದ್ಯಮ ಬಲಪಡಿಸುವ ಯೋಜನೆಗೆ ಕೇಂದ್ರ ಸಚಿವ ಜೆ.ಪಿ.ನಡ್ಡಾ ಚಾಲನೆ
- ಹಬ್ಬಗಳ ಹಿನ್ನೆಲೆಯಲ್ಲಿ ಭಾರತೀಯ ರೈಲ್ವೆಯಿಂದ ೧೬೪ ವಿಶೇಷ ರೈಲುಗಳ ಸಂಚಾರ
- ಟಿ-೨೦ ಕ್ರಿಕೆಟ್: ದಕ್ಷಿಣ ಆಫ್ರಿಕಾ ವಿರುದ್ಧ ಭಾರತಕ್ಕೆ ೬೧ ರನ್‌ಗಳ ಅಮೋಘ ಜಯ
- ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್: ಐದನೇ ಸುತ್ತಿಗೆ ಅರ್ಜುನ್ ಎರಿಗೈಸಿ ಮುನ್ನಡೆ

***********

ಕೇಂದ್ರದ ಎನ್‌ಡಿಎ ಸರ್ಕಾರ ಮತ್ತು ಮಹಾರಾಷ್ಟ್ರದಲ್ಲಿನ ಮಹಾಯುತಿ ಸರ್ಕಾರ ಹಿಂದುಳಿದವರ ಕಲ್ಯಾಣಕ್ಕೆ ಬದ್ಧವಾಗಿದೆ ಎಂದು ಬಿಜೆಪಿಯ ಹಿರಿಯ ನಾಯಕ ಮತ್ತು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಮಹಾರಾಷ್ಟ್ರದ ನಾಸಿಕ್‌ನಲ್ಲಿ ನಿನ್ನೆ ನಡೆದ ಪ್ರಚಾರ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಉಜ್ವಲ ಯೋಜನೆಯಡಿ ಮಹಾರಾಷ್ಟ್ರದ ೫೦ ಲಕ್ಷ ಮಹಿಳೆಯರು ಉಚಿತ ಎಲ್‌ಪಿಜಿ ಸಂಪರ್ಕವನ್ನು ಪಡೆದಿದ್ದಾರೆ ಮತ್ತು ಹರ್ ಘರ್ ಜಲ್ ಯೋಜನೆಯಡಿ ೧ ಕೋಟಿ ೨೫ ಲಕ್ಷಕ್ಕೂ ಹೆಚ್ಚು ಕುಟುಂಬಗಳು ಪೈಪ್‌ಲೈನ್ ನೀರಿನ ಸಂಪರ್ಕವನ್ನು ಪಡೆದಿವೆ ಎಂದರು. ಮಹಾರಾಷ್ಟ್ರದಲ್ಲಿ ೬ ಕೋಟಿಗೂ ಹೆಚ್ಚು ಹಿಂದುಳಿದವರು ಉಚಿತ ಪಡಿತರ ಪಡೆಯುತ್ತಿದ್ದು, ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ ೬ ಲಕ್ಷಕ್ಕೂ ಹೆಚ್ಚು ಪಕ್ಕಾ ಮನೆಗಳನ್ನು ನಿರ್ಮಿಸಲಾಗಿದೆ ಎಂದು ಅವರು ಹೇಳಿದರು.

ಇದಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಧುಲೆಯಲ್ಲಿ ನಿನ್ನೆ ನಡೆದ ಚುನಾವಣಾ ರ್ಯಾಲಿ ಉದ್ದೇಶಿಸಿ ಮಾತನಾಡಿದರು. ಸಾಂಗ್ಲಿ ಜಿಲ್ಲೆಯ ಶಿರಲಾದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಿದ್ದರು. ಇದೇ ವೇಳೆ ಐ.ಎನ್.ಡಿ.ಐ. ಮೈತ್ರಿಕೂಟದ ನಾಯಕರು ರಾಜ್ಯದ ವಿವಿಧೆಡೆ ತಮ್ಮ ಪಕ್ಷದ ಅಭ್ಯರ್ಥಿಗಳ ಪರವಾಗಿ ಮತಯಾಚಿಸಿದರು. ಮಹಾರಾಷ್ಟ್ರ ವಿಧಾನಸಭೆಗೆ ಇದೇ ೨೦ರಂದು ಮತದಾನ ನಡೆಯಲಿದ್ದು, ಇದೇ ೨೩ ರಂದು ಮತ ಎಣಿಕೆ ಕಾರ್ಯ ನಡೆಯಲಿದೆ.

***********

ಜಾರ್ಖಂಡ್ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಎನ್‌ಡಿಎ ಮತ್ತು ಐ.ಎನ್.ಡಿ.ಐ. ಮೈತ್ರಿಕೂಟದ ನಾಯಕರು ಮತಯಾಚನೆಯಲ್ಲಿ ತೊಡಗಿದ್ದಾರೆ. ಸಿಮ್ಡೆಗಾದಲ್ಲಿ ನಿನ್ನೆ ನಡೆದ ಚುನಾವಣಾ ರ್ಯಾಲಿ ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಹಿರಿಯ ನಾಯಕ ರಾಹುಲ್ ಗಾಂಧಿ, ಜಾರ್ಖಂಡ್‌ನಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಜಾತಿವಾರು ಗಣತಿ ನಡೆಸಲಾಗುವುದು ಹಾಗೂ ಮೀಸಲಾತಿ ಮೇಲಿನ ಶೇಖಡ ೫೦ರಷ್ಟು ಮಿತಿಯನ್ನು ತೆಗೆದುಹಾಕಲಾಗುವುದು ಎಂದು ಭರವಸೆ ನೀಡಿದರು. ೮೧ ವಿಧಾನಸಭಾ ಕ್ಷೇತ್ರಗಳ ಜಾರ್ಖಂಡ್ ವಿಧಾನಸಭೆಗೆ ಇದೇ ೧೩ ಮತ್ತು ೨೦ರಂದು ಎರಡು ಹಂತದಲ್ಲಿ ಮತದಾನ ನಡೆಯಲಿದೆ. ಇದೇ ೨೩ರಂದು ಮತ ಎಣಿಕೆ ಕಾರ್ಯ ನಡೆಯಲಿದೆ.

***********

ವೈದ್ಯಕೀಯ ಸಾಧನ ಉದ್ಯಮವನ್ನು ಬಲಪಡಿಸುವ ಯೋಜನೆಗೆ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಜಗತ್ ಪ್ರಕಾಶ್ ನಡ್ಡಾ ನವದೆಹಲಿಯಲ್ಲಿ ನಿನ್ನೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಈ ಯೋಜನೆಯು ವೈದ್ಯಕೀಯ ಸಾಧನ ಕ್ಷೇತ್ರದಲ್ಲಿ ಬದಲಾವಣೆ ತರಲಿದ್ದು, ಇದರ ಪರಿಣಾಮವು ಅಪಾರವಾಗಿರಲಿದೆ. ಇದು ಈ ಕ್ಷೇತ್ರದಲ್ಲಿ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡುತ್ತದೆ. ಜೊತೆಗೆ ಸರ್ಕಾರದ ಪ್ರೊಡಕ್ಷನ್ ಲಿಂಕ್ಡ್ ಇನ್ಸೆಂಟಿವ್-ಪಿಎಲ್ಐ ಯೋಜನೆಯು ಉದ್ಯಮಕ್ಕೆ ಹೊಸ ಮಾರ್ಗವನ್ನು ತೆರೆಯಲಿದೆ ಎಂದು ಹೇಳಿದರು. ಫಾರ್ಮಾಸ್ಯುಟಿಕಲ್ಸ್ ಕಾರ್ಯದರ್ಶಿ ಅರುಣೀಶ್ ಚಾವ್ಲಾ ಮಾತನಾಡಿ, ನೂತನ ಯೋಜನೆಯಡಿ ೫೦೦ ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ.

ಇದು ಐದು ಘಟಕಗಳನ್ನು ಒಳಗೊಂಡಿದ್ದು, ವೈದ್ಯಕೀಯ ಸಾಧನ ಕ್ಲಸ್ಟರ್‌ಗಳಿಗೆ ಸಾಮಾನ್ಯ ಸೌಲಭ್ಯಗಳು, ಸಾಮರ್ಥ್ಯ ನಿರ್ಮಾಣ ಮತ್ತು ಕೌಶಲ್ಯ ಅಭಿವೃದ್ಧಿ, ಆಮದು ಅವಲಂಬನೆಯನ್ನು ತಗ್ಗಿಸುವ ಯೋಜನೆ, ಕ್ಲಿನಿಕಲ್ ಅಧ್ಯಯನ ಬೆಂಬಲ ಕಾರ್ಯಕ್ರಮ ಮತ್ತು ವೈದ್ಯಕೀಯ ಸಾಧನಗಳಿಗೆ ಪ್ರಚಾರ ಯೋಜನೆ ಇದರಲ್ಲಿ ಒಳಗೊಂಡಿದೆ ಎಂದು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಹಾಯಕ ಸಚಿವೆ ಅನುಪ್ರಿಯಾ ಪಟೇಲ್ ಉಪಸ್ಥಿತರಿದ್ದರು.

***********

ಹಬ್ಬದ ಋತುವಿನಲ್ಲಿ ಭಾರತೀಯ ರೈಲ್ವೆ ೪ ಸಾವಿರದ ೫೨೧ ವಿಶೇಷ ರೈಲುಗಳ ಮೂಲಕ ಸುಮಾರು ೬೫ ಲಕ್ಷ ಪ್ರಯಾಣಿಕರ ಸುಗಮ ಪ್ರಯಾಣಕ್ಕೆ ನೆರವಾಗಿದೆ. ರೈಲ್ವೆ ಸಚಿವಾಲಯದ ಪ್ರಕಾರ, ಭಾರತೀಯ ರೈಲ್ವೆಯ ಮೂಲಕ ಅಕ್ಟೋಬರ್ ೧ ರಿಂದ ನವೆಂಬರ್ ೫ರವರೆಗೆ ಬಿಹಾರ, ಉತ್ತರ ಪ್ರದೇಶ ಹಾಗೂ ಜಾರ್ಖಂಡ್ ರಾಜ್ಯಗಳಿಂದ ಸುಮಾರು ೬ ಕೋಟಿ ೮೫ ಲಕ್ಷ ಪ್ರಯಾಣಿಕರು ಪ್ರಯಾಣ ಮಾಡಿದ್ದಾರೆ. ವಿಶೇಷ ರೈಲುಗಳ ಸುಗಮ ಸಂಚಾರ ಹಾಗೂ ಪ್ರಯಾಣಿಕರ ಸುರಕ್ಷತೆಗಾಗಿ ರೈಲ್ವೆ ರಕ್ಷಣಾ ಪಡೆ ಹಾಗೂ ಸ್ವಯಂ ಸೇವಕರನ್ನು ನಿಯೋಜಿಸಲಾಗಿದೆ. ಇನ್ನೊಂದೆಡೆ, ಛಟ್ ಪೂಜೆ ಸೇರಿದಂತೆ ನಾನಾ ಹಬ್ಬಗಳ ಹಿನ್ನೆಲೆಯಲ್ಲಿ ಪ್ರಯಾಣಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಭಾರತೀಯ ರೈಲ್ವೆ ೧೬೪ ವಿಶೇಷ ರೈಲುಗಳ ಸಂಚಾರ ವ್ಯವಸ್ಥೆ ಕಲ್ಪಿಸಲಿದೆ. ಪ್ರಯಾಣಿಕರು ಹಬ್ಬದ ಆಚರಣೆ ನಂತರ ತಮ್ಮ ಊರುಗಳಿಗೆ ಹಿಂತಿರುಗಲು ಈ ರೈಲುಗಳು ಸಹಕಾರಿಯಾಗಲಿವೆ.

***********

ರಾಷ್ಟ್ರೀಯ ಕಲಿಕಾ ಸಪ್ತಾಹದ ಉಪಕ್ರಮವಾದ ಕರ್ಮಯೋಗಿ ಸಪ್ತಾಹವು ೩೮ ಲಕ್ಷ ಗಂಟೆಗಳ ಪರಿವರ್ತಕ ಕಲಿಕೆಯ ಅಭಿಯಾನದ ಮೂಲಕ ಅಭೂತಪೂರ್ವ ಪರಿಣಾಮ ಸಾಧಿಸಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಈ ಉಪಕ್ರಮವು ೪೫ ಲಕ್ಷಕ್ಕೂ ಹೆಚ್ಚು ಕೋರ್ಸ್ ದಾಖಲಾತಿಗಳನ್ನು ಕಂಡಿದೆ ಎಂದು ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದು-ಕೊರತೆಗಳು ಮತ್ತು ಪಿಂಚಣಿಗಳ ಸಚಿವಾಲಯ ತಿಳಿಸಿದೆ.

ಈ ವರ್ಷ ಅಕ್ಟೋಬರ್ ೧೯ ರಿಂದ ೨೭ ರವರೆಗೆ ಆಚರಿಸಲಾದ ಕರ್ಮಯೋಗಿ ಸಪ್ತಾಹದಲ್ಲಿ ೪.೩ ಲಕ್ಷ ಸರ್ಕಾರಿ ಸಿಬ್ಬಂದಿ ಭಾಗವಹಿಸಿದ್ದು, ಕನಿಷ್ಠ ನಾಲ್ಕು ಗಂಟೆಗಳನ್ನು ಕಲಿಕೆಗೆ ಮೀಸಲಿಟ್ಟರು. ಸುಮಾರು ೩೭ ಸಾವಿರ ಗ್ರೂಪ್ 'ಎ' ಅಧಿಕಾರಿಗಳು ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳೊಂದಿಗೆ ವೃತ್ತಿಪರ ಅಭಿವೃದ್ಧಿಗೆ ಆದ್ಯತೆ ನೀಡಿದರು ಎಂದು ಸಚಿವಾಲಯ ಮಾಹಿತಿ ನೀಡಿದೆ.

***********

ಆಸಿಯಾನ್ ರಾಷ್ಟ್ರಗಳಲ್ಲಿ ರಾಜಕೀಯ ಬಿಕ್ಕಟ್ಟು ಎದುರಾದಾಗ ಅವುಗಳನ್ನು ಸಾಮೂಹಿಕವಾಗಿ ಎದುರಿಸುವ ಅಗತ್ಯವಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ಸಿಂಗಾಪುರದಲ್ಲಿ ನಿನ್ನೆ ಆಸಿಯಾನ್-ಭಾರತ ಚಿಂತನಾಜಾಲದ ೮ನೇ ದುಂಡುಮೇಜಿನ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮ್ಯಾನ್ಮಾರ್ ದೇಶದ ಉದಾಹರಣೆ ನೀಡಿ, ಅಂತಹ ಪರಿಸ್ಥಿತಿಗಳು ಎದುರಾದಾಗ ಅವುಗಳನ್ನು ಸಮರ್ಥವಾಗಿ ಹತ್ತಿಕ್ಕಬೇಕಾಗಿದೆ ಎಂದರು. ಇದಕ್ಕೂ ಮುನ್ನ, ಉಪ ಪ್ರಧಾನಿ ಮತ್ತು ವ್ಯಾಪಾರ ಮತ್ತು ಕೈಗಾರಿಕಾ ಸಚಿವ ಗನ್ ಕಿಮ್ ಯೋಂಗ್ ಅವರನ್ನು ಭೇಟಿ ಮಾಡಿ ಸಮಾಲೋಚಿಸಿದರು. ಉಭಯ ನಾಯಕರು ಕೈಗಾರಿಕಾ ಪಾರ್ಕ್‌ಗಳು, ನಾವೀನ್ಯತೆ ಮತ್ತು ಸೆಮಿಕಂಡಕ್ಟರ್ ಸೇರಿದಂತೆ ಹಲವು ವಲಯಗಳಲ್ಲಿ ಸಮಕಾಲೀನ ಹಾಗೂ ದ್ವಿಪಕ್ಷೀಯ ಪಾಲುದಾರಿಕೆ ಬಲಪಡಿಸುವ ನಿಟ್ಟಿನಲ್ಲಿ ಚರ್ಚೆ ನಡೆಸಿದರು. ಭಾರತ ಮತ್ತು ಸಿಂಗಾಪುರ ನಿಕಟ ದ್ವಿಪಕ್ಷೀಯ ಸಂಬಂಧವನ್ನು ಹೊಂದಿವೆ. ಸಿಂಗಾಪುರದಲ್ಲಿ ಶೇಕಡ ೯.೨ರಷ್ಟು ಭಾರತೀಯ ಸಮುದಾಯದ ಜನರಿದ್ದಾರೆ.

***********

ಭಾರತೀಯ ಮಿಲಿಟರಿ ಪಾರಂಪರಿಕ ಉತ್ಸವದ ಎರಡನೇ ಆವೃತ್ತಿ ದೆಹಲಿಯಲ್ಲಿ ನಿನ್ನೆಯಿಂದ ಆರಂಭವಾಗಿದೆ. ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಅವರು ಉತ್ಸವವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮೂರು ಸೇನಾಪಡೆಗಳ ಮುಖ್ಯಸ್ಥರು ಭಾಗವಹಿಸಿದ್ದರು.

ಇದೇ ವೇಳೆ, ಶೌರ್ಯಗಾಥಾ ಯೋಜನೆಗೆ ಚಾಲನೆ ನೀಡಲಾಯಿತು. ಈ ಯೋಜನೆಯಡಿ ಮಿಲಿಟರಿ ವ್ಯವಹಾರಗಳ ಇಲಾಖೆಯು ಭಾರತದ ಮಿಲಿಟರಿ ಪರಂಪರೆಯನ್ನು ಶಿಕ್ಷಣ ಮತ್ತು ಪ್ರವಾಸೋದ್ಯಮದ ಮೂಲಕ ಸಂರಕ್ಷಿಸುವ ಮತ್ತು ಉತ್ತೇಜಿಸುವ ಗುರಿಯನ್ನು ಹೊಂದಲಾಗಿದೆ. ಎರಡು ದಿನಗಳ ಈ ಉತ್ಸವದಲ್ಲಿ ಭಾರತದ ರಾಷ್ಟ್ರೀಯ ಭದ್ರತೆ, ವಿದೇಶಾಂಗ ನೀತಿ, ಮಿಲಿಟರಿ ಇತಿಹಾಸ ಹಾಗೂ ಮಿಲಿಟರಿ ಪರಂಪರೆ ಕುರಿತು ಚರ್ಚೆ ಹಾಗೂ ಸಂವಾದಗಳು ನಡೆಯಲಿವೆ.

***********

ದಕ್ಷಿಣ ಆಫ್ರಿಕಾದ ಡರ್ಬನ್‌ನ ಕಿಂಗ್ಸ್‌ಮಿಡ್ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ೪ ಪಂದ್ಯಗಳ ಸರಣಿಯ ಮೊದಲ ಟಿ-೨೦ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಭಾರತ ೬೧ ರನ್‌ಗಳಿಂದ ಅಮೋಘ ಜಯ ದಾಖಲಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ ನಿಗದಿತ ೨೦ ಓವರ್‌ಗಳಲ್ಲಿ ೮ ವಿಕೆಟ್ ನಷ್ಟಕ್ಕೆ ೨೦೨ ರನ್‌ಗಳನ್ನು ಕಲೆಹಾಕಿತು. ಭಾರತದ ಪರ ಸಂಜು ಸ್ಯಾಮ್ಸನ್ ೫೦ ಬಾಲ್‌ಗಳಿಗೆ ೧೦೭ ರನ್ ಪೇರಿಸಿದರು. ಭಾರತ ನೀಡಿದ ಗುರಿಯನ್ನು ಬೆನ್ನತ್ತಿದ ದಕ್ಷಿಣ ಆಫ್ರಿಕಾ ತಂಡ, ೧೭.೫ ಓವರ್‌ಗಳಲ್ಲಿ ಎಲ್ಲಾ ವಿಕೆಟ್ ಕಳೆದುಕೊಂಡು, ೧೪೧ ರನ್‌ಗಳನ್ನು ಗಳಿಸಲಷ್ಟೇ ಸಾಧ್ಯವಾಯಿತು. ಈ ಮೂಲಕ ಭಾರತ ಸರಣಿಯಲ್ಲಿ ೧-೦ ಅಂತರದ ಮುನ್ನಡೆ ಸಾಧಿಸಿದೆ. ತಮ್ಮ ಟಿ-೨೦ ಅಂತಾರಾಷ್ಟ್ರೀಯ ವೃತ್ತಿ ಜೀವನದಲ್ಲಿ ಎರಡನೇ ಶತಕ ಸಿಡಿಸಿದ ಭಾರತದ ವಿಕೆಟ್‌ಕೀಪರ್ ಮತ್ತು ಬ್ಯಾಟ್ಸ್‌ಮನ್ ಸಂಜು ಸ್ಯಾಮ್ಸನ್ ಪಂದ್ಯ ಶ್ರೇಷ್ಠ ಗೌರವಕ್ಕೆ ಪಾತ್ರರಾದರು. ದಕ್ಷಿಣ ಆಫ್ರಿಕಾದ ಸೇಂಟ್ ಜಾರ್ಜ್ ಪಾರ್ಕ್‌ನಲ್ಲಿ ನಾಳೆ ಭಾರತ ಮತ್ತು ದಕ್ಷಿಣ ಆಫ್ರಿಕಾ ಸರಣಿಯ ಎರಡನೇ ಟಿ-೨೦ ಪಂದ್ಯ ನಡೆಯಲಿದೆ.

***********

ಚೆಸ್‌ನಲ್ಲಿ, ವಿಶ್ವ ನಂ.೨ ಅರ್ಜುನ್ ಎರಿಗೈಸಿ ನಿನ್ನೆ ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಕ್ಲಾಸಿಕಲ್ ಪಂದ್ಯಾವಳಿಯ ಮಾಸ್ಟರ್ಸ್ ವಿಭಾಗದ ನಾಲ್ಕನೇ ಸುತ್ತಿನಲ್ಲಿ ಇರಾನ್‌ನ ಅಮಿನ್ ತಬತಾಬೈ ಅವರನ್ನು ಸೋಲಿಸಿದರು. ಈ ಗೆಲುವಿನೊಂದಿಗೆ ಅರ್ಜುನ್ ಎರಿಗೈಸಿ, ೩.೫ ಅಂಕಗಳೊಂದಿಗೆ ಮುನ್ನಡೆ ಸಾಧಿಸಿದರು.

ಅವರು ಇಂದು ಐದನೇ ಸುತ್ತಿನಲ್ಲಿ ಇರಾನ್‌ನ ಪರ್ಹಮ್ ಮಗ್ಸೂದ್ಲೂ ಅವರನ್ನು ಎದುರಿಸಲಿದ್ದಾರೆ. ಮಾಸ್ಟರ್ಸ್ ಆಕ್ಷನ್ ವಿಭಾಗದಲ್ಲಿ ವಿದಿತ್ ಗುಜರಾತಿ ಮತ್ತು ಅರವಿಂದ್ ಚಿತ್ತಂಬರಂ ತಮ್ಮ ಎದುರಾಳಿಗಳಾದ ಮ್ಯಾಕ್ಸಿಮ್ ವಾಚಿಯರ್-ಲಾಗ್ರೇವ್ ಮತ್ತು ಲೆವೊನ್ ಅರೋನಿಯನ್ ವಿರುದ್ಧ ಡ್ರಾ ಸಾಧಿಸಿದರು. ಚಾಲೆಂಜರ್ಸ್ ವಿಭಾಗದಲ್ಲಿ ಪ್ರಣವ್ ವೆಂಕಟೇಶ್ ಅವರು ವೈಶಾಲಿ ರಮೇಶಬಾಬು ಅವರನ್ನು ಸೋಲಿಸುವ ಮೂಲಕ ಸತತ ನಾಲ್ಕನೇ ಗೆಲುವು ಸಾಧಿಸಿದರು. ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್‌ನ ಎರಡನೇ ಆವೃತ್ತಿಯು ನವೆಂಬರ್ ೧೧ ರಂದು ಮುಕ್ತಾಯಗೊಳ್ಳಲಿದೆ.

***********

ಫ್ರಾನ್ಸ್‌ನ ಮಡ್ಜ್‌ನಲ್ಲಿ ನಡೆಯುತ್ತಿರುವ ಟೆನಿಸ್ ಮೊಸ್ಸೆಲ್ಲೆ ಓಪನ್ ಪಂದ್ಯಾವಳಿಯ ಸೆಮಿಫೈನಲ್ ಪಂದ್ಯದಲ್ಲಿ ನಿನ್ನೆ ಭಾರತದ ಋತ್ವಿಕ್ ಚೌಧರಿ ಬೊಲ್ಲಿಪಲ್ಲಿ ಮತ್ತು ಪೋರ್ಚುಗೀಸ್‌ನ ಫ್ರಾನ್ಸಿಸ್ ಕೊ ಕ್ಯಾಬ್ರಲ್ ಜೋಡಿಯು, ೩-೬, ೬-೭ ನೇರ ಸೆಟ್‌ಗಳಿಂದ ಫ್ರಾನ್ಸ್‌ನ ಪಿಯರೆ-ಹ್ಯೂಗ್ಸ್ ಹರ್ಬರ್ಟ್ ಮತ್ತು ಅಲ್ಬಾನೊ ಒಲಿವೆಟ್ಟಿ ಜೋಡಿ ವಿರುದ್ಧ ಪರಾಭವಗೊಂಡಿದೆ. ಈ ಮೂಲಕ ಋತ್ವಿಕ್-ಫ್ರಾನ್ಸಿಸ್ ಜೋಡಿಯು ಪಂದ್ಯಾವಳಿಯಿಂದ ಹೊರಬಿದ್ದಿದೆ.

***********

ವಿವಿಧ ಅಂಶಗಳಲ್ಲಿ ಸಂಪರ್ಕವು ಪ್ರವಾಸೋದ್ಯಮಕ್ಕೆ ಪೂರಕವಾಗಿದೆ ಮತ್ತು ಇದು ಡಿಜಿಟಲ್ ಸಂಪರ್ಕವನ್ನು ಒಳಗೊಂಡಿದೆ ಎಂದು ಶ್ರೀಲಂಕಾದಲ್ಲಿರುವ ಭಾರತದ ಹೈಕಮಿಷನರ್ ಸಂತೋಷ್ ಝಾ ಹೇಳಿದ್ದಾರೆ. ಕೊಲಂಬೊದಲ್ಲಿ ನಿನ್ನೆ ನಡೆದ ದಕ್ಷಿಣ ಏಷ್ಯಾ ಪ್ರವಾಸೋದ್ಯಮ ನಾಯಕತ್ವ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತ ಮತ್ತು ಶ್ರೀಲಂಕಾ ನಡುವಿನ ಪಾಲುದಾರಿಕೆಯ ಕೇಂದ್ರ ಅಂಶವೇ ಸಂಪರ್ಕ. ಭಾರತದ ಡಿಜಿಟಲ್ ಬೆಳವಣಿಗೆಯು ಅತ್ಯಂತ ಮಹತ್ವದ್ದಾಗಿದ್ದು, ಡಿಜಿಟಲ್ ಕ್ಷೇತ್ರದಲ್ಲಿ ಏಕೀಕರಣಗೊಳ್ಳಲು ಶ್ರೀಲಂಕಾ ಕೆಲಸ ಮಾಡಬೇಕಾಗಿದೆ ಎಂದರು. ಶ್ರೀಲಂಕಾ ಪ್ರವಾಸೋದ್ಯಮಕ್ಕೆ ಭಾರತವು ಅತಿದೊಡ್ಡ ಕೊಡುಗೆ ನೀಡುತ್ತಿದೆ. ಭಾರತ ಮತ್ತು ಶ್ರೀಲಂಕಾ ನಡುವೆ ಪ್ರತಿ ವಾರ ೨೫೦ಕ್ಕೂ ಹೆಚ್ಚು ವಿಮಾನಗಳು ಕಾರ್ಯನಿರ್ವಹಿಸುತ್ತವೆ ಎಂದು ಸಂತೋಷ್ ಝಾ ಹೇಳಿದರು.

***********